# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

**ದಿನಾಂಕ: 28.01.2022 ರಂದು ಬೆಳಿಗ್ಗೆ 11:00 ಗಂಟೆಗೆ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2021-22ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪರಮಶಿವಮೂರ್ತಿ ಡಿ.ವಿ<br>ಡೀನರು, ಕಲಾ ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು, ತುಮಕೂರು ಜಿ.-572137. | ಸದಸ್ಯರು |
| 4. | ಶ್ರೀಮತಿ ಲತಾ ಬಿ.ಎಸ್<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 5. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ | ಸದಸ್ಯರು |
| 6. | ಡಾ. ಟಿ. ವೆಂಕಟಾಚಲಯ್ಯ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ)<br>ತುಮಕೂರು ಜಿಲ್ಲೆ. | ಸದಸ್ಯರು |
| 7. | ಡಾ. ಕೆ ಸಿ ಜಯಸ್ವಾಮಿ<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು<br>ಬಿ.ಹೆಚ್ ರಸ್ತೆ, ತುಮಕೂರು | ಸದಸ್ಯರು |
| 8. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು-572102. | ಸದಸ್ಯರು |
| 9. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-560009. | ಸದಸ್ಯರು |
| 10. | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 11. | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>ಬೆಂಗಳೂರು-560064. | ಸದಸ್ಯರು |
| 12. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು-572201. ತುಮಕೂರು ಜಿಲ್ಲೆ. | ಸದಸ್ಯರು |
| 13. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು-572105. | ಸದಸ್ಯರು |
| 14. | ಪ್ರೊ. ಎಲ್.ಪಿ. ರಾಜು<br>ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸದಸ್ಯರು |
| 15. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 17. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

| ಆನ್‌ಲೈನ್ ಮುಖಾಂತರ ಹಾಜರಾದ ಸದಸ್ಯರು | | |
|---|---|---|
| 1 | ಶ್ರೀಮತಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು–560094. | ಸದಸ್ಯರು |

<u>ಹಾಜರಾಗದ ಸದಸ್ಯರು</u>

| | | |
|---|---|---|
| 1 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 28.01.2022 ಶುಕ್ರವಾರ ಬೆಳಗ್ಗೆ 11:00 ಕ್ಕೆ ನಡೆದ 2021–22ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಗೆ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಮಾನ್ಯ ಕುಲಸಚಿವರು ಕಾರ್ಯಸೂಚಿಗಳ ಮಂಡಿಸಿ, ಈ ಬಗ್ಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 12.11.2021ರಂದು ನಡೆದ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯ ಮತ್ತು ದಿನಾಂಕ 30.11.2021 ರಂದು ನಡೆದ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.<br>• ಹಳೆ ಪಿಂಚಣಿ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಿ ಹೊಸ ಪಿಂಚಣಿ ಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಕುರಿತು ಹಳೆ ಪಿಂಚಣಿ ಯೋಜನೆಯನ್ನು ಮುಂದುವರೆಸುವ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಈ ಸಂಬಂಧವಾಗಿ ಶ್ರೀ ಪ್ರಸನ್ನಕುಮಾರ್ ರವರ ಅಧ್ಯಕ್ಷತೆಯಲ್ಲಿ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ, ಪ್ರೊ. ರವೀಂದ್ರಕುಮಾರ್ ಬಿ., ಪ್ರೊ. ಸುದರ್ಶನರೆಡ್ಡಿ ಜಿ., ಸದಸ್ಯರುಗಳು, ಡಾ. ಎಸ್. ನಾಗರಾಜ ಉಪಕುಲಸಚಿವರು, ಸಿಬ್ಬಂದಿ ವಿಭಾಗ ಸಂಚಾಲಕರು, ಇವರುಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸುವುದು ಹಾಗೂ ಸದರಿ ಸಮಿತಿಯು ಸರ್ಕಾರದ ನಿಯಮಾವಳಿಗಳನ್ನು ಪರಿಗಣಿಸಿ ನೀಡುವ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. | | | |

| | | ಸಿಬ್ಬಂದಿ ವಿಭಾಗ | |
|---|---|---|---|
| 1. | 2021–22.ಸಾ.ಸಿಂ.02<br>ಸಿ.ವಿ–01 | M.Sc. in Food and Nutrition ಕೋರ್ಸಿಗೆ ಸಂಯೋಜಕರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು. | ಡಾ. ದೇವರಾಜ ಎಸ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು ಇವರನ್ನು M.Sc. in Food and Nutrition ಕೋರ್ಸಿಗೆ ಸಂಯೋಜಕರನ್ನಾಗಿ ನೇಮಿಸಿ ದಿನಾಂಕ |

| | | | |
|---|---|---|---|
| | | | 09.12.2021ರಂದು ಆದೇಶ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. |
| 2. | 2021–22.ಸಾ.ಸಿಂ.02 ಸಿ.ವಿ–02 | ಗುಣಾತ್ಮಕ ಚಲನಚಿತ್ರವನ್ನು ನಿರ್ದೇಶಿಸಿ, ಪಾತ್ರವೊಂದರಲ್ಲಿ ಅಭಿನಯಿಸಲು ಹಾಗೂ ಚಲನಚಿತ್ರಕ್ಕೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯಲ್ಲಿ, ಮಾಧ್ಯಮಗಳಲ್ಲಿ ಚರ್ಚಿಸಲು ಅನುಮತಿ ನೀಡುವಂತೆ ಕೋರಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮ 1966ರ ಕ್ರಮ ಸಂಖ್ಯೆ 10 ಮತ್ತು 11ರಲ್ಲಿ ಉಪಬಂಧಿಸಿರುವ ನಿಯಮಗಳನ್ನು ಪಾಲಿಸುವ ಹಾಗೂ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ಹೊರೆ ಆಗದಂತೆ ವಿಧಿಸಬಹುದಾದ ಷರತ್ತುಗಳಿಗೊಳಪಟ್ಟು ನಿಯಮಾನುಸಾರ ಅನುಮತಿಸಿ, ಕ್ರಮವಹಿಸಲು ನಿರ್ಣಯಿಸಿತು. |
| 3. | 2021–22.ಸಾ.ಸಿಂ.02 ಸಿ.ವಿ–03 | ಡಾ. ಎ.ಎಂ. ಮಂಜುನಾಥ್, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಇವರು ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ನಿರ್ವಹಿಸಲು ಆದೇಶಿಸಿರುವ ಕುರಿತು. | ಡಾ. ಎ.ಎಂ. ಮಂಜುನಾಥ್, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಇವರಿಗೆ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯವು ದಿನಾಂಕ 01.12.2021ರಂದು ಹೊರಡಿಸಿರುವ ಕಚೇರಿ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ, ಸ್ಥಿರೀಕರಿಸಿತು. ಮುಂದುವರೆದು ಗಳಿಕೆ ರಜೆಯ ಸಂಬಂಧ ಕೆ.ಸಿ.ಎಸ್ ನಿಯಮಾನುಸಾರ 113 ಉಪಬಂಧಗಳನ್ವಯ ಅಗತ್ಯ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದಲ್ಲಿ ಹಾಗೂ ನಿಗದಿತ ಅವಧಿಯನ್ನು ಪೂರೈಸಿದ ನಂತರ ಗಳಿಕೆ ರಜೆಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿತು. |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 4. | 2021–22.ಸಾ.ಸಿಂ.02 ಸಾ&ಅ–01 | ISETILAB Incubation Foundation Infopace Management Pvt. Ltd India and Vision Karnataka Foundation Bangalore ಇವರೊಂದಿಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು. | ISETILAB Incubation Foundation Infopace Management Pvt. Ltd India and Vision Karnataka Foundation Bangalore ಇವರೊಂದಿಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಸದರಿ ಸಂಸ್ಥೆಯವರು ಸಲ್ಲಿಸಿರುವ ಒಡಂಬಡಿಕೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಒಡಂಬಡಿಕೆಯ ಅವಧಿಯನ್ನು ಎರಡು ವರ್ಷಗಳಿಗೆ ಸೀಮಿತಗೊಳಿಸಿ ಸದರಿಯವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅನುಮೋದಿಸಿತು. |
| 5. | 2021–22.ಸಾ.ಸಿಂ.02 ಸಾ&ಅ–02 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ ಮತ್ತು ಎಂ.ಟಿ.ಎಂ. ಸ್ಥಳಾವಕಾಶಕ್ಕಾಗಿ ಮಾಡಿಕೊಳ್ಳಲಾದ ಕರಾರನ್ನು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ ಮತ್ತು ಎಂ.ಟಿ.ಎಂ. ಸ್ಥಳಾವಕಾಶಕ್ಕಾಗಿ ಮಾಡಿಕೊಳ್ಳಲಾದ ಕರಾರನ್ನು |

| | | | |
|---|---|---|---|
| | | ನವೀಕರಿಸುವಂತೆ ಕೋರಿ ಸಲ್ಲಿಸಿರುವ ಮನವಿ ಕುರಿತು | ನವೀಕರಿಸುವ ಸಂಬಂಧ ಚರ್ಚಿಸಿದ ಸಭೆಯು ಕರಾರನ್ನು ದಿನಾಂಕ 15.02.2022 ರಿಂದ ಮುಂದಿನ 05 ವರ್ಷಗಳ ಅವಧಿಗೆ ನವೀಕರಿಸುವಂತೆ ನಿರ್ಣಯಿಸಿ ಲೋಕೋಪಯೋಗಿ ಇಲಾಖೆಯ ಹೊಸ ದರಗಳ ನಿಯಮದಂತೆ ಬಾಡಿಗೆ ನಿಗದಿಪಡಿಸುವಂತೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 6. | 2021-22.ಸಾ.ಸಿಂ.02 ಸಾ&ಅ-03 | ತುಮಕೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿನ ಕ್ಲರ್ಕ್-ಕಂ-ಟೈಪಿಸ್ಟ್ (ತಾತ್ಕಾಲಿಕ)ರ ಸೇವೆಯನ್ನು ಮುಂದುವರೆಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿನ ಕ್ಲರ್ಕ್-ಕಂ-ಟೈಪಿಸ್ಟ್ (ತಾತ್ಕಾಲಿಕ)ರ ಸೇವೆಯನ್ನು ನಿರ್ವಹಿಸುತ್ತಿರುವ ಶ್ರೀಮತಿ ಗಾಯತ್ರಿ ಎಸ್.ಜಿ ಇವರ ಸೇವೆಯನ್ನು ಮುಂದುವರೆಸಿ ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 7. | 2021-22.ಸಾ.ಸಿಂ.02 ಸಾ&ಅ-04 | 2020-21ನೇ ಶೈಕ್ಷಣಿಕ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು 2021-22ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಿರುವ ಹಾಗೂ ಅವಶ್ಯಕವಿರುವ ವಿಭಾಗಗಳಿಗೆ ಅಧಿಸೂಚನೆ ಹೊರಡಿಸಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು | ಕಳೆದ 2020-21ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದ ಅತಿಥಿ ಉಪನ್ಯಾಸಕರನ್ನು ಪ್ರಸ್ತುತ 2021-22ನೇ ಸಾಲಿಗೂ ಸೇವೆಯಲ್ಲಿ ಮುಂದುವರೆಸಿರುವ ಹಾಗೂ 2021-22ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರನ್ನು ಹೊಸದಾಗಿ ನೇಮಕ ಮಾಡಿಕೊಳ್ಳುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| | | **ಖರೀದಿ ಕೋಶ** | |
| 8. | 2021-22.ಸಾ.ಸಿಂ.02 ಖ.ಕೋ-01 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ 03 ಲಕ್ಷ ಪ್ರಮಾಣದ ಉತ್ತರ ಪುಸ್ತಕಗಳನ್ನು ಸರಬರಾಜು ಮಾಡಿರುವ ಹುಂಡಿಯ ಮೊತ್ತ ರೂ.20,10,000-00 (ರೂಪಾಯಿ ಇಪ್ಪತ್ತು ಲಕ್ಷದ ಹತ್ತು ಸಾವಿರ ಮಾತ್ರ) ಗಳನ್ನು ಮೆ. ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಮೆ. ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ 03 ಲಕ್ಷ ಪ್ರಮಾಣದ ಉತ್ತರ ಪುಸ್ತಕಗಳನ್ನು ಸರಬರಾಜು ಮಾಡಿರುವ ಪ್ರಯುಕ್ತ ಹುಂಡಿಯ ಮೊತ್ತ ರೂ.20,10,000-00 (ರೂಪಾಯಿ ಇಪ್ಪತ್ತು ಲಕ್ಷದ ಹತ್ತು ಸಾವಿರ ಮಾತ್ರ) ಗಳನ್ನು ಪಾವತಿಸಲು ದಿನಾಂಕ 12.01.2022ರಂದು ಮಂಜೂರಾತಿ ಆದೇಶ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 9. | 2021-22.ಸಾ.ಸಿಂ.02 ಖ.ಕೋ-02 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಲೇಖನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು M/s Samanthu Business forms Pvt. Ltd., Bangalore ಮತ್ತು M/s Basavesh offset | M/s Samanthu Business forms Pvt. Ltd., Bangalore ಮತ್ತು M/s Basavesh offset Printers, Tumkur ಇವರುಗಳಿಗೆ ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಲೇಖನ |

| | | | |
|---|---|---|---|
| | | Printers, Tumkur ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ದಿನಾಂಕ 22.12.2021 ರಂದು ಸರಬರಾಜು ಆದೇಶಗಳನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| | | **ಪರೀಕ್ಷಾ ವಿಭಾಗ** | |
| 10. | 2021–22.ಸಾ.ಸಿಂ.02 ಪ.ವಿ–01 | 2021ರ ಅಕ್ಟೋಬರ್ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು. | ಅಕ್ಟೋಬರ್ 2021ರ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ದರ ಕರಾರು ಒಪ್ಪಂದದಂತೆ ಒದಗಿಸಿರುವ ವಾಹನಗಳ ಬಾಡಿಗೆ ಮೊತ್ತ ರೂ.56,788.00 (ರೂಪಾಯಿ ಐವತ್ತಾರು ಸಾವಿರದ ಏಳುನೂರ ಎಂಬತ್ತೆಂಟು ಮಾತ್ರ)ಗಳನ್ನು ಮೆ.ಗುರು ಟ್ರಾವೆಲ್ಸ್, ತುಮಕೂರು ಇವರಿಗೆ ನಿಯಮಾನುಸಾರ ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 11. | 2021–22.ಸಾ.ಸಿಂ.02 ಸಾ&ಅ–05 | DALHAM Eduflix Private Limited Bangalore: Proposal for Implementing 21st Century Skills Micro Learning Program for Tumkur University Students, ಒಡಂಬಡಿಕೆ ಮಾಡಿಕೊಳ್ಳುವ ಕುರಿತು. | DALHAM Eduflix Private Limited Bangalore ಇವರು ಸಲ್ಲಿಸಿರುವ ಒಡಂಬಡಿಕೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಅನುಕೂಲವಾಗುವ ಕಾರಣದಿಂದಾಗಿ ಹಾಗೂ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಸದರಿ ಸಂಸ್ಥೆಯವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. ಮುಂದುವರೆದು, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳು ತಮ್ಮ ಅಗತ್ಯಕ್ಕನುಗುಣವಾಗಿ ಸಂಸ್ಥೆಯೊಂದಿಗೆ ಚರ್ಚಿಸಿ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತು. |
| | | **ಖರೀದಿ ಕೋಶ** | |
| 12. | 2021–22.ಸಾ.ಸಿಂ.02 ಖ.ಕೋ–02 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ದೈನಂದಿನ ಕುಡಿಯುವ ನೀರನ್ನು ಸರಬರಾಜು ಪಡೆಯುವ ಸಂಬಂಧ ವಾರ್ಷಿಕ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯಕ್ಕೆ ದೈನಂದಿನ ಕುಡಿಯುವ ನೀರನ್ನು ಸರಬರಾಜು ಮಾಡಲು ಮೆ. ಕುಂದನಾ ಅಕ್ವಾ ಕೇರ್, ತುಮಕೂರು ಇವರೊಂದಿಗೆ ವಿಶ್ವವಿದ್ಯಾನಿಲಯವು ದಿನಾಂಕ 04.01.2022ರಂದು ಮಾಡಿಕೊಂಡಿರುವ ವಾರ್ಷಿಕ ದರಕರಾರು ಒಪ್ಪಂದದ ಕ್ರಮಕ್ಕೆ ಸಿಂಡಿಕೇಟ್ ಸಭೆಯ ಅನುಮೋದಿಸಿ ಸ್ಥಿರೀಕರಿಸಿತು. |
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 13 | 2021–22.ಸಾ.ಸಿಂ.02 ಕಾ.ಅ.ಪ.–01 | ಹೋಲಿ ಟ್ರಿನಿಟಿ ಕಾಲೇಜು, ಕುಣಿಗಲ್ ಈ ಕಾಲೇಜಿನ 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಡೀನರ ಸಮಿತಿಯು ಸಲ್ಲಿಸಿರುವ ವರದಿಯ ಕುರಿತು. | ಹೋಲಿ ಟ್ರಿನಿಟಿ ಕಾಲೇಜು, ಕುಣಿಗಲ್ ಈ ಕಾಲೇಜಿನ 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಡೀನರ ಸಮಿತಿಯು |

| | | | | |
|---|---|---|---|---|
| | | | | ಸಲ್ಲಿಸಿದ್ದ ಮರುತಪಾಸಣಾ ವರದಿಯ ಪರಿಶೀಲಿಸಿ ಸಭೆಯು ಅನುಮೋದಿಸಿ, ಸದರಿ ಸಮಿತಿಯ ಶಿಫಾರಸ್ಸಿನ್ವಯ 2021–22ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣ ಮಂಜೂರು ಮಾಡಲು ಸಭೆಯು ನಿರ್ಣಯಿಸಿತು. |

| | | | |
|---|---|---|---|
| ಪ್ರೊ. ಪರಮಶಿವಮೂರ್ತಿ ಡಿ.ವಿ | | ಶ್ರೀ ಪ್ರಸನ್ನಕುಮಾರ್ | |
| ಶ್ರೀ ಶ್ರೀನಿವಾಸ ಆರ್.ಕೆ. . | | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ | |
| ಪ್ರೊ. ಹೆಚ್.ಎಸ್. ಶಿವಯೋಗಿ | | ಶ್ರೀ ರಾಜು | |
| ಡಾ. ಟಿ. ವೆಂಕಟಾಚಲಯ್ಯ | | ಶ್ರೀ ಟಿ.ಡಿ. ವಿನಯ್ | |
| ಡಾ. ಕೆ ಸಿ ಜಯಸ್ವಾಮಿ | | ಪ್ರೊ. ಎಲ್.ಪಿ. ರಾಜು | |
| ಶ್ರೀಮತಿ ಲತಾ ಬಿ.ಎಸ್ | | ಕುಲಸಚಿವರು (ಪರೀಕ್ಷಾಂಗ) | |
| ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | | ಹಣಕಾಸು ಅಧಿಕಾರಿಗಳು | |
| ಶ್ರೀಮತಿ ಎಂ.ಎಸ್. ಭವ್ಯ | | | |

ಕುಲಸಚಿವರು

ಮಾನ್ಯ ಕುಲಪತಿಗಳು